ಅ) ಶಿಥಿಲವಾದ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಲು ಸರ್ಕಾರವು ಪ್ರತಿವರ್ಷ ಬಡ್ಜೆಟ್‌ನಲ್ಲಿ ಹಣ ಒದಗಿಸಿ ಅಂತಹ ಸಂಸ್ಥೆಗೆ ಅನುದಾನ ನೀಡುತ್ತದೆ. ಸರ್ಕಾರದ ಅನುದಾನದಿಂದ ಅಥವಾ ದೇವಾಲಯದ ನಿಧಿಯಿಂದ ಜೀರ್ಣೋದ್ಧಾರ ಮಾಡಲಾಗುತ್ತಿದೆ. ಈ ದಿಸೆಯಲ್ಲಿ ಕಳೆದ ಐದು ವರ್ಷದಿಂದ ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ಜೀರ್ಣೋದ್ಧಾರಕ್ಕೆ ಸರ್ಕಾರವು ೧,೫೧೧ ಸಂಸ್ಥೆಗಳಿಗೆ ರೂ. ೩,೯೨,೮೬,೫೫೯ ಅನುದಾನವನ್ನು ಮಂಜೂರು ಮಾಡಿದೆ.

ಇ)	ಮುಜರಾಯಿ	೭೪
	ಮೈನರ್ ಮುಜರಾಯಿ	೬
	ಸ್ಥಿರ ಆಸ್ತಿಗಳು	ಇರುವುದಿಲ್ಲ
	ದೇವಾಲಯದ ಹೆಸರಿನಲ್ಲಿ ಶೇಖರವಾಗಿರುವ ಹಣ	ರೂ. ೧,೦೨,೭೫೦
	ಚಿನ್ನ ಬೆಳ್ಳಿ ಆಭರಣಗಳ ಬೆಲೆ ಸುಮಾರು	ರೂ. ೬೯,೫೦೦

ಹರಿಜನ ಮೊಹಲ್ಲಗಳಲ್ಲಿ ಕೈಬಿಟ್ಟಿರುವ ವಿದ್ಯುಚ್ಛಕ್ತಿ ಕಂಬಗಳನ್ನು ಹಾಕುವ ಬಗ್ಗೆ.

೨೮೧. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ವಿದ್ಯುತ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಹರಿಜನ ಗಿರಿಜನ ಮತ್ತು ಬಂಜಾರಿ ಜನಾಂಗವಿರುವ ಕಾಲೋನಿಗಳಲ್ಲಿ ಕೇವಲ ಒಂದೆರಡು ರಸ್ತೆಗಳಲ್ಲಿ ಮಾತ್ರ ವಿದ್ಯುತ್ ಕಂಬಗಳಿದ್ದು ಉಳಿದ ರಸ್ತೆಗಳಲ್ಲಿ ವಿದ್ಯುತ್ ಕಂಬ ವಿಸ್ತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಈ ರೀತಿ ಕತ್ತಲೆಯಲ್ಲಿ ಜೀವನ ನಡೆಸುತ್ತಿರುವ ಬಡ ಕೂಲಿ ಕಾರ್ಮಿಕರು ಸಂಬಂಧಪಟ್ಟ ಅಧಿಕಾರಿಗಳನ್ನು ವಿದ್ಯುತ್ ಕಂಬಗಳನ್ನು ಹಾಕುವಂತೆ ಕೇಳಲು ಹೋದಾಗ ಸರ್ಕಾರದಿಂದ ಪ್ರತ್ಯೇಕವಾಗಿ ಅನುಮತಿ ಬರಬೇಕೆಂದು ನಮ್ಮ ಕಚೇರಿ ಅಧಿಕಾರಿಗಳಿಗೆ ಈ ಅಧಿಕಾರ ಇಲ್ಲವೆಂದು ಹೇಳುತ್ತಿರುವುದು ನಿಜವೇ ?

ಶ್ರೀ ಜೆ.ಎಸ್. ದೇಶಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಬಂದಿದೆ,

ಆ) ಈಗಾಗಲೆ ವಿದ್ಯುದ್ದೀಕರಣವಾಗಿರುವ ಗ್ರಾಮಗಳಲ್ಲಿ ಹೆಚ್ಚುವರಿ ಬೀದಿ ದೀಪ ಒದಗಿಸುವ ಬಗ್ಗೆ ಮತ್ತು ಹರಿಜನರು, ವಾಸಿಸುವ ಬಸದಿಗಳಲ್ಲಿ ವಿದ್ಯುತ್ ಕಂಬಗಳನ್ನು ಹಾಕುವ ಬಗ್ಗೆ ಸದ್ಯದಲ್ಲಿ ಸರ್ಕಾರ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುವದಿದೆ.

ಉಡಪಿ ಭೂ ನ್ಯಾಯ ಮಂಡಳಿಯಲ್ಲಿ ಪರಿಹಾರ ಪಾವತಿಯಲ್ಲಿನ ಅವ್ಯವಹಾರದ ಬಗ್ಗೆ.

೪೪೯. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ಭೂ ನ್ಯಾಯ ಮಂಡಳಿಯಲ್ಲಿ ಪರಿಹಾರ ಪಾವತಿಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಇದರ ಮೊತ್ತ ಎಷ್ಟು?

ಇ) ಈ ವಿಚಾರದಲ್ಲಿ ಯಾವ ಕ್ರಮ ಕೈಕೊಳ್ಳಲಾಗಿದೆ ?

ಶ್ರೀ ಎಸ್.ಆರ್. ಬೊಮ್ಮಾಯಿ(ಮಾನ್ಯ ಕಂದಾಯ ಮಂತ್ರಿಗಳು).—

ಅ) ಹೌದು.

ಆ) ೪೨,೪೮೭-೦೦

ಇ) ಸಂಬಂಧಿಸಿದ ತಹಶೀಲ್ದಾರ್ ಹಾಗೂ ಶಿರಸ್ತೆದಾರರನ್ನು ಅಮಾನತ್ತಿನಲ್ಲಿಡಲಾಗಿದೆ.